ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER :

ದಿನಾಂಕ : DATE :

# ಪ್ರಣಬ್, ನಾನಾಜಿ ಮತ್ತು ಭೂಪೇನ್‌ಗೆ ಭಾರತರತ್ನ

ದೆಹಲಿ: ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ, ಅಸ್ಸಾಮಿ ಗಾಯಕ ಹಾಗೂ ಸಂಗೀತ ಸಂಯೋಜಕ ಭೂಪೇನ್ ಹಜಾರಿಕಾ ಮತ್ತು ಸಾಮಾಜಿಕ ಕಾರ್ಯಕರ್ತ ನಾನಾಜಿ ದೇಶ್‌ಮುಖ್ ಅವರಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ ಅವರು ಗುರುವಾರ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರವಾದ 'ಭಾರತ ರತ್ನ'ವನ್ನು ನೀಡಿ ಗೌರವಿಸಿದರು. ಈ ಪೈಕಿ ಭೂಪೇನ್ ಹಜಾರಿಕಾ ಮತ್ತು ನಾನಾಜಿ ದೇಶ್‌ಮುಖ್ ಅವರಿಗೆ ಮರಣೋತ್ತರವಾಗಿ ಪುರಸ್ಕಾರವನ್ನು ಪ್ರದಾನಿಸಲಾಗಿದ್ದು, ಅವರ ಕುಟುಂಬದ ಸದಸ್ಯರು ಈ ಪ್ರಶಸ್ತಿಯನ್ನು ಸ್ವೀಕರಿಸಿದರು. ರಾಷ್ಟ್ರಪತಿ ಭವನ ಜನವರಿ 25ರಂದು ನೀಡಿದ ಹೇಳಿಕೆಯಲ್ಲಿ ಭಾರತ ರತ್ನ ಪುರಸ್ಕಾರ ಸಂಬಂಧಿತ ಘೋಷಣೆ ಮಾಡಲಾಗಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು.



## ಪುರಸ್ಕೃತರ ಪರಿಚಯ

### ಪ್ರಣಬ್ ಮುಖರ್ಜಿ

ಸರಿಸುಮಾರು ಐದು ದಶಕಗಳ ರಾಜಕೀಯ ಜೀವನದ ಹೆಜ್ಜೆಗುರುತುಗಳನ್ನು ಹೊಂದಿರುವ 83ರ ಹರೆಯದ ಪ್ರಣಬ್ ಅವರು ಈ ಅವಧಿಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಮಹತ್ವದ ಹಲವು ಹುದ್ದೆಗಳನ್ನು ಅಲಂಕರಿಸಿದ್ದರ ಜತೆಗೆ, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಪಿ.ವಿ. ನರಸಿಂಹ ರಾವ್ ಹಾಗೂ ಮನಮೋಹನ್ ಸಿಂಗ್ ನೇತೃತ್ವದ ಸರಕಾರಗಳಲ್ಲಿ ಮಹತ್ವದ ಸಚಿವ ಖಾತೆಗಳನ್ನು ನಿಭಾಯಿಸಿದ ದಾಖಲೆ ಹೊಂದಿದ್ದಾರೆ. 2009-2012ರ ಅವಧಿಯಲ್ಲಿ ಕೇಂದ್ರ ಹಣಕಾಸು ಸಚಿವರಾಗಿದ್ದ ಪ್ರಣಬ್, 2012-2017ರ ಅವಧಿಯಲ್ಲಿ ದೇಶದ 13ನೇ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ್ದಾರೆ. ಭಾರತ ರತ್ನ ಪ್ರಶಸ್ತಿಯಿಂದ ಪುರಸ್ಕೃತರಾದ ಇನ್ನಿತರ ರಾಷ್ಟ್ರಪತಿಗಳಲ್ಲಿ ಡಾ. ಎಸ್. ರಾಧಾಕೃಷ್ಣನ್, ರಾಜೇಂದ್ರ ಪ್ರಸಾದ್, ಝಾಕಿರ್ ಹುಸೇನ್ ಹಾಗೂ ವಿ.ವಿ. ಗಿರಿ ಸೇರಿದ್ದಾರೆ.

### ದಿ. ನಾನಾಜಿ ದೇಶ್‌ಮುಖ್

ಮಹಾರಾಷ್ಟ್ರದ ಹಿಂಗೋಲಿ ಎಂಬ ಪಟ್ಟಣದಲ್ಲಿ 1916ರ ಅಕ್ಟೋಬರ್ 11ರಂದು ಜನಿಸಿದ ನಾನಾಜಿ, 1977ರಿಂದ 1979ರವರೆಗೆ ಲೋಕಸಭೆಯಲ್ಲಿ ಉತ್ತರಪ್ರದೇಶದ ಬಲರಾಂಪುರ ಕ್ಷೇತ್ರವನ್ನು ಪ್ರತಿನಿಧಿಸಿದರು.



1999ರಿಂದ 2005ರವರೆಗೆ ರಾಜ್ಯಸಭೆಯ ಓರ್ವ ನಾಮನಿರ್ದೇಶಿತ ಸದಸ್ಯರಾಗಿಯೂ ಸೇವೆ ಸಲ್ಲಿಸಿದ ನಾನಾಜಿ ಅವರಿಗೆ ಈ ಹಿಂದೆ ಪದ್ಮ ವಿಭೂಷಣ ಪುರಸ್ಕಾರ ನೀಡಿ ಗೌರವಿಸಲಾಗಿತ್ತು. ಭಾರತೀಯ ಜನಸಂಘದ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ನಾನಾಜಿ, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಪ್ರೇರಿತ ಸರಣಿಶಾಲೆಗಳನ್ನು ಭಾರತವ್ಯಾಪ್ಯಂತ ಹುಟ್ಟುಹಾಕಿದರು. 2010ರಲ್ಲಿ ತಮ್ಮ 94ನೇ ವಯಸ್ಸಿನಲ್ಲಿ ಅಸುನೀಗುವವರೆಗೂ ಆರ್‌ಎಸ್‌ಎಸ್ ಜತೆ ನಂಟು ಕಾಯ್ದುಕೊಂಡಿದ್ದು ಇವರ ಹೆಗ್ಗಳಿಕೆ. 1974ರ ತುರ್ತು ಪರಿಸ್ಥಿತಿಯ ವಿರುದ್ಧ ಶುರುವಾದ ಜೆಪಿ ಆಂದೋಲನದಲ್ಲಿ ಮಹತ್ವದ ಕೊಡುಗೆ ನೀಡಿದ್ದ ನಾನಾಜಿ, 1977ರಲ್ಲಿ ಜನತಾಪಕ್ಷದ ಸರಕಾರ ರೂಪುಗೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

### ದಿ. ಭೂಪೇನ್ ಹಜಾರಿಕಾ

ಅಸ್ಸಾಮಿ ಗಾಯಕ ದಿ.ಭೂಪೇನ್ ಹಜಾರಿಕಾ ಅವರು ಬಂಗಾಳ ಮತ್ತು ಬಾಂಗ್ಲಾದೇಶದಲ್ಲಿ ಅತ್ಯಂತ ಜನಪ್ರಿಯರಾಗಿದ್ದವರು.



ಅಸ್ಸಾಂ ಮತ್ತು ಈಶಾನ್ಯ ಭಾರತದ ಸಂಸ್ಕೃತಿ ಮತ್ತು ಜನಪದ ಸಂಗೀತವನ್ನು ಹಿಂದಿ ಚಿತ್ರರಂಗಕ್ಕೆ ಪರಿಚಯಿಸಿದ ಶ್ರೇಯವೂ ಇವರಿಗೆ ಸಲ್ಲುತ್ತದೆ. ರಾಷ್ಟ್ರೀಯ ಚಲನಚಿತ್ರ ಪುರಸ್ಕಾರ, ಪದ್ಮಶ್ರೀ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ಪದ್ಮವಿಭೂಷಣ ಹಾಗೂ ಇನ್ನೂ ಅನೇಕ ಪ್ರತಿಷ್ಠಿತ ಗೌರವಾದರಗಳಿಗೆ ಪಾತ್ರರಾಗಿದ್ದ ಭೂಪೇನ್, ತಮ್ಮ ಮಧ್ಯಮ-ಶಾರೀರದ ದನಿಗೆ ಹೆಸರಾಗಿದ್ದರು.